## 2015 ಕ.ತೀ.ವ 174

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

**ಶ್ರೀ ಗೋಪಾಲ್ ರೆಡ್ಡಿ ಶೀಲಂ, @ ನಿತ್ಯಾಭಕ್ತಾನಂದ –ವಿರುದ್ಧ– ಕರ್ನಾಟಕ ರಾಜ್ಯದ ಪರವಾಗಿ ಸ್ಟೇಷನ್ ಹೌಸ್ ಆಫೀಸರ್, ಬಿಡದಿ ಪೋಲೀಸ್ ಠಾಣೆ ಮತ್ತು ಮತ್ತೊಬ್ಬರು***

**ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರಡಿಯಲ್ಲಿ ಕ್ರಿಮಿನಲ್ ಅರ್ಜಿಗಳು.**

**ಐ.ಪಿ.ಸಿ. 396, 377, 420, 114, 201, 417, 415, 596(1) ಹಾಗೂ 120–ಬಿ– ಪ್ರಕರಣಗಳು.**

**2 ರಿಂದ 5ನೇ ಆರೋಪಿಗಳನ್ನು ದೋಷಾರೋಪದಿಂದ ಮುಕ್ತಗೊಳಿಸುವಂತೆ ಅಧಿವಿಚಾರಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅವರು ಈ ಪ್ರಕರಣದಲ್ಲಿ ದೋಷಾರೋಪದಿಂದ ಮುಕ್ತಗೊಳಿಸುವಂತೆ ಅರ್ಜಿಯನ್ನೂ ಸಲ್ಲಿಸಿಲ್ಲ. ಈ ಕಾರಣದಿಂದ 2ರಿಂದ 5ನೇ ಆರೋಪಿಗಳ ಅರ್ಜಿಯು ಅಕಾಲಿಕವಾದದ್ದು. ಮೊದಲನೇ ಆರೋಪಿಯ ಧ್ವನಿಪರೀಕ್ಷೆ, ರಕ್ತಪರೀಕ್ಷೆ ಹಾಗೂ ಪುರುಷತ್ವ ಪರೀಕ್ಷೆಗಳು ತನಿಖೆಗೆ ಬೇಕಾಗಿರುವುದೆಂಬ ಸರ್ಕಾರದ (Prosecution) ಪ್ರಾರ್ಥನೆ ನ್ಯಾಯೋಚಿತವಾಗಿದೆ. ಈ ಎಲ್ಲಾ ಮುಖ್ಯ ಕಾರಣಗಳಿಂದ ಎಲ್ಲಾ ಅರ್ಜಿಗಳನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿದೆ.**

ಕ್ರಿ.ಅ.ಸಂಖ್ಯೆ: 234/2011
ಅರ್ಜಿದಾರರ ಪರ : ಶ್ರೀ ಸಿ.ವಿ.ನಾಗೇಶ್ ಅಸೋಸಿಯೇಟ್ಸ್ ಪರವಾಗಿ
ಶ್ರೀ ಕೆ.ರಾಘವೇಂದ್ರ – ವಕೀಲರು,
ಪ್ರತ್ಯರ್ಜಿದಾರರ ಪರ : ಶ್ರೀ ಕೇಶವಮೂರ್ತಿ – ಹೆಚ್ಚುವರಿ ಎಸ್.ಪಿ.ಪಿ.

ಕ್ರಿಮಿನಲ್ ಅರ್ಜಿ 4090/2011 :
ಅರ್ಜಿದಾರರ ಪರ : ಶ್ರೀ ಅಭಿಜಿತ್ ಹಾರನಹಳ್ಳಿ
: ಶ್ರೀ ಸ್ವಾಮಿನಿ ಜಿ.ಮೋಹನಂಬಾಳ್ – ವಕೀಲರು,

*ಕ್ರಿಮಿನಲ್ ಅರ್ಜಿ ಸಂ. 234/2011 ಇದರೊಂದಿಗೆ ಇತರೆ, ದಿನಾಂಕ: 16ನೇ ಜುಲೈ, 2014.

1& 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೇಶವಮೂರ್ತಿ – ಹೆಚ್ಚುವರಿ ಎಸ್.ಪಿ.ಪಿ.,
3ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಟಿ.ಎಸ್. ರಾಜರಾಜೇಶ್ವರಿ – ವಕೀಲರು,
ಡಿ.ಜಿ.ಪಿ. ಮೂಲಕ 4ನೇ ಪ್ರತ್ಯರ್ಜಿದಾರರಿಗೆ ನೋಟೀಸು ಜಾರಿಮಾಡಲಾಗಿದೆ,
ತಮಿಳುನಾಡು ಪೊಲೀಸರ ವರದಿ ಕಾದಿರಿಸಿದೆ.
ಕ್ರಿಮಿನಲ್ ಅರ್ಜಿ 957/2011 :
ಅರ್ಜಿದಾರರ ಪರ : ಶ್ರೀ ರವಿ. ಬಿ.ನಾಯಕ್ ಅಸೋಸಿಯೇಟ್ಸ್ – ವಕೀಲರು
ಕೆ.ಬಿ.ಮೋನಿಶ್ ಕುಮಾರ್ – ವಕೀಲರು,
ಪ್ರತ್ಯರ್ಜಿದಾರರ ಪರ : ಶ್ರೀ ಕೇಶವಮೂರ್ತಿ – ಹೆಚ್ಚುವರಿ ಎಸ್.ಪಿ.ಪಿ.

ಕ್ರಿಮಿನಲ್ ಅರ್ಜಿ 4582–2012 :
ಅರ್ಜಿದಾರರ ಪರ : ಶ್ರೀ ಕೆ.ರಾಘವೇಂದ್ರ – ವಕೀಲರು,
ಶ್ರೀ ಸಿ.ವಿ.ನಾಗೇಶ್ ಅಸೋಸಿಯೇಟ್ಸ್,
ಪ್ರತ್ಯರ್ಜಿದಾರರ ಪರ : ಶ್ರೀ ಕೇಶವಮೂರ್ತಿ – ಹೆಚ್ಚುವರಿ ಎಸ್.ಪಿ.ಪಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ರಾಮನಗರದ ಸಿ.ಜೆ.ಎಂ. ನ್ಯಾಯಾಲಯದ ಕಡತದಲ್ಲಿ ಬಾಕಿ ಇರುವ ಸಿ.ಸಿ.ಸಂಖ್ಯೆ 204/2010ರಲ್ಲಿ ಆಪಾದಿತ ಸಂಖ್ಯೆ 2ರಿಂದ 5ರವರೆಗಿನ ಆಪಾದಿತರು ಮೂರು ಅರ್ಜಿಗಳಲ್ಲಿ ಅಂದರೆ, ಸದರಿ ವ್ಯವಹರಣೆಯಲ್ಲಿ ಆಪಾದಿತ ಸಂಖ್ಯೆ 2 ಆದ ಗೋಪಾಲ ರೆಡ್ಡಿ ಶೀಲಂ ಸಲ್ಲಿಸಿದ ಕ್ರಿಮಿನಲ್ ಅರ್ಜಿ ಸಂಖ್ಯೆ 234/2011, ಆಪಾದಿತ ಸಂಖ್ಯೆ–3 ಆದ ಶಿವವಲ್ಲಭನೇನಿ ಸಲ್ಲಿಸಿದ ಕ್ರಿಮಿನಲ್ ಅರ್ಜಿ ಸಂಖ್ಯೆ 957/2011 ಮತ್ತು ಆಪಾದಿತ ಸಂಖ್ಯೆ–4 ಹಾಗೂ 5 ಆದ ಅಂದರೆ, ಧನಶೇಖರನ್ @ ನಿತ್ಯಾಸದಾನಂದ ಮತ್ತು ರಾಗಿಣಿ–ಇವರು ಅದನ್ನು ರದ್ದುಪಡಿಸಲು ಕೋರಿದ್ದಾರೆ. ನಾಲ್ಕನೇ ಅರ್ಜಿಯಾದ ಕ್ರಿಮಿನಲ್ ಅರ್ಜಿ ಸಂಖ್ಯೆ 4852/2012ಕ್ಕೆ ಸಂಬಂಧಿಸಿದಂತೆ ನಿತ್ಯಾನಂದ ಸ್ವಾಮಿಯ ರಕ್ತಪರೀಕ್ಷೆಗಾಗಿ ಅವರ ರಕ್ತದ ಮಾದರಿ, ಧ್ವನಿ ವಿಶ್ಲೇಷಣೆಗಾಗಿ ಅವರ ಧ್ವನಿಯ ಮಾದರಿಯನ್ನು ನೀಡಬೇಕೆಂದು ಹಾಗೂ ಪುರುಷತ್ವ ನಿರ್ಧರಣೆಗಾಗಿ

ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕೆಂದು ಅವರಿಗೆ ನಿರ್ದೇಶಿಸಲಾಗಿದ್ದ, ದಂಡ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದೊಂದಿಗೆ ಓದಲಾದ 58–ಎ ಪ್ರಕರಣದ ಅಡಿಯಲ್ಲಿ ಸಿ.ಸಿ.ಸಂಖ್ಯೆ 204/2010ರಲ್ಲಿ ಹೊರಡಿಸಿದ ದಿನಾಂಕ 18.6.2012ರ ಆದೇಶವನ್ನು ತಳ್ಳಿಹಾಕಲು ಕೋರಿ ಆಪಾದಿತ ಸಂಖ್ಯೆ 1 ಆದ ನಿತ್ಯಾನಂದ ಸ್ವಾಮಿ ಈ ಅರ್ಜಿ ಸಲ್ಲಿಸಿದ್ದಾರೆ.

2. ಆಪಾದಿತ ಸಂಖ್ಯೆ–1 ಆದ ನಿತ್ಯಾನಂದ ಸ್ವಾಮಿ ವಿರುದ್ಧ ಎರಡು ದೂರುಗಳನ್ನು ದಾಖಲಿಸಲಾಗಿತ್ತೆಂದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಅದರಲ್ಲಿ ಒಂದು, ವಿಶ್ವನಾಥನ್ ನೀಡಿದ ದೂರಿನ ಆಧಾರದ ಮೇಲೆ ಮದ್ರಾಸಿನ ಎಗ್ಮೋರ್ ಅಪರಾಧ ಶಾಖೆಯಿಂದ ಅಪರಾಧ ಸಂಖ್ಯೆ 112/2010ರಲ್ಲಿ ದಾಖಲಾಗಿತ್ತು. ಆಪಾದಿತ ವ್ಯಕ್ತಿಯು ವಾಸವಾಗಿದ್ದ ಅಧಿಕಾರವ್ಯಾಪ್ತಿ ಪ್ರದೇಶವು ಕರ್ನಾಟಕವಾಗಿರುವ ಕಾರಣ, ದೂರನ್ನು ರಾಮನಗರ ಪೊಲೀಸರಿಗೆ ಕಳುಹಿಸಲಾಗಿತ್ತು ಮತ್ತು ಅದು ಅಪರಾಧ ಸಂಖ್ಯೆ 142/2010ರಲ್ಲಿ ದಾಖಲಾಗಿತ್ತು. ಎರಡನೇ ದೂರು, ಶ್ರೀ ಲೆನಿನ್ ಎಂಬುವವರು ದಾಖಲಿಸಿದ್ದು, ಅಪರಾಧ ಸಂಖ್ಯೆ 141/2010ರಲ್ಲಿ ರಾಮನಗರ ಗ್ರಾಮೀಣ ಪೊಲೀಸರಿಂದ ದಾಖಲಾಗಿತ್ತು. ಸದರಿ ದೂರಿಗೆ ಸಂಬಂಧಿಸಿದ ತನಿಖೆಯನ್ನು ಸಿ.ಓ.ಡಿ.ಗೆ ವಹಿಸಲಾಗಿತ್ತು. ಸಿ.ಓ.ಡಿ. ಪೊಲೀಸರು ತನಿಖೆ ನಡೆಸಿ, ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದರೆಂದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ದೋಷಾರೋಪ ಪಟ್ಟಿ ಸಲ್ಲಿಕೆಗೆ ಅನುಸರಣೆಯಾಗಿ, 415, 506(1) ಮತ್ತು 120–ಬಿ ಪ್ರಕರಣದೊಂದಿಗೆ ಓದಲಾದ 376, 377, 420, 114, 201, 417ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಸಿ.ಸಿ.ಸಂಖ್ಯೆ 204/2010ರಲ್ಲಿ ವ್ಯವಹರಣೆಗಳು ದಾಖಲಾಗಿವೆ.

3. ಸದರಿ ವ್ಯವಹರಣೆಗಳಲ್ಲಿ, ಆಪಾದಿತ ಸಂಖ್ಯೆ 2ರಿಂದ 5ರವರೆಗಿನ ಆಪಾದಿತ ದೂರುಗಳೇನೆಂದರೆ, ಆಪಾದಿತ ಸಂಖ್ಯೆ 2ರ ವಿರುದ್ಧ ಆರೋಪಿಸಲಾದ ಅಪರಾಧಗಳು ಭಾರತ ದಂಡ ಸಂಹಿತೆಯ 114, 120–ಬಿ ಪ್ರಕರಣದಡಿಯಲ್ಲಿ ದಂಡನೀಯವಾಗಿವೆ, ಆಪಾದಿತ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ, ಅವು ಭಾರತ ದಂಡ ಸಂಹಿತೆಯ 201, 120–ಬಿ ಅಡಿಯಲ್ಲಿ ದಂಡನೀಯವಾಗಿವೆ. ಆಪಾದಿತ ಸಂಖ್ಯೆ 4ಕ್ಕೆ ಸಂಬಂಧಿಸಿದಂತೆ

ಅವು ಮತ್ತೆ ಭಾರತ ದಂಡ ಸಂಹಿತೆಯ 114, 120–ಬಿ ಪ್ರಕರಣಗಳ ಅಡಿಯಲ್ಲಿ ಹಾಗೂ ಆಪಾದಿತ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ, ಅಪರಾಧಗಳು ಭಾರತ ದಂಡ ಸಂಹಿತೆಯ 376, 120–ಬಿ ಪ್ರಕರಣಗಳ ಅಡಿಯಲ್ಲಿ ದಂಡನೀಯವಾಗಿವೆ ಹಾಗೂ ಇದಕ್ಕೆ ದಾಖಲೆಯಲ್ಲಿ ಯಾವುವೇ ಸಾಕ್ಷ್ಯಗಳು ಲಭ್ಯವಿಲ್ಲ. ಆರೋಪಪಟ್ಟಿ ಸಾಕ್ಷಿದಾರರ ಹೇಳಿಕೆಗಳು, ಹಿಂದೆ ಹೇಳಿದ ಅಪರಾಧಗಳನ್ನು ಅವರ ವಿರುದ್ಧ ಆರೋಪಿಸಲಾಗಿದೆಯೆಂದು ಮತ್ತು ಹಿಂದೆ ಹೇಳಿದ ವ್ಯವಹರಣೆಗಳಲ್ಲಿ, ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಅನಗತ್ಯವಾಗಿ ಪ್ರಾಸಿಕ್ಯೂಷನ್‌ಗೆ ಒಳಪಡಿಸಲಾಗಿದೆಯೆಂಬ ಕಾರಣದಿಂದ ಪ್ರಾಸಿಕ್ಯೂಷನ್ ಅನ್ನು ಸಮರ್ಥಿಸುವುದಿಲ್ಲ ಮತ್ತು ಪ್ರಾಸಿಕ್ಯೂಷನ್ ನಡೆಸಲು ಯಾವುದೇ ಸಾಕ್ಷ್ಯಗಳಿಲ್ಲದಿರುವುದರಿಂದ ಅವರ ವಿರುದ್ಧದ ವ್ಯವಹರಣೆಗಳನ್ನು ರದ್ದುಪಡಿಸತಕ್ಕದ್ದು.

4. ಅಂಗೀಕರಿಸಲಾದಂತೆ, ಆಪಾದಿಸಲಾದ ದೂರಿನ ಬಗ್ಗೆ ಸಿ.ಓ.ಡಿ ಪೊಲೀಸರು ಸಮಗ್ರ ತನಿಖೆ ನಡೆಸಿದ ನಂತರ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆರೋಪಪಟ್ಟಿ ಸಾಕ್ಷಿದಾರರ ಎಲ್ಲಾ ಹೇಳಿಕೆಗಳು ಮತ್ತು ಇತರ ದಾಖಲೆಗಳು ಆಪಾದಿತ ಸಂಖ್ಯೆ 1ರಿಂದ 4ರವರೆಗಿನ ಆಪಾದಿತರ ವಿರುದ್ಧ ಮಾಡಿದ್ದ ಆರೋಪಗಳನ್ನು ಸಮರ್ಥಿಸುತ್ತಿಲ್ಲ. ಹಿಂದೆ ಹೇಳಿದ ವ್ಯವಹರಣೆಗಳಲ್ಲಿ ಅವರು ತಮ್ಮನ್ನು ಆರೋಪಮುಕ್ತಗೊಳಿಸಲು ಕೋರುವುದಕ್ಕೆ ಅವುಗಳನ್ನು ಅನುಕೂಲ ಮಾಡಿಕೊಳ್ಳಲು ಸ್ವತಂತ್ರರಾಗಿದ್ದಾರೆ. ತತ್‌ಕ್ಷಣದ ವ್ಯವಹರಣೆಗಳಲ್ಲಿ ಆಪಾದಿತ ಸಂಖ್ಯೆ 2ರಿಂದ 5ರವರೆಗಿನ ಆಪಾದಿತರು, ಹಿಂದೆ ಹೇಳಿದ ಅಪರಾಧ ಪ್ರಕರಣದಲ್ಲಿ ವ್ಯವಹರಣೆಗಳಿಂದ ತಮ್ಮನ್ನು ಆರೋಪಮುಕ್ತಗೊಳಿಸಲು ಕೋರಿ ಅರ್ಜಿಯನ್ನು ಸಹ ಸಲ್ಲಿಸಿಲ್ಲ. ಇಂಥ ಸಂದರ್ಭಗಳಲ್ಲಿ, ಈ ನ್ಯಾಯಾಲಯವು ಆರೋಪ ಪಟ್ಟಿಯನ್ನು ರದ್ದುಪಡಿಸುವ ಅಗತ್ಯವಿದೆಯೇ? ಅಥವಾ ಅದರಲ್ಲಿ ಆಪಾದಿತರು ಅಧಿವಿಚಾರಣೆಯನ್ನು ಎದುರಿಸತಕ್ಕದ್ದೇ? ಎಂಬುದನ್ನು ಪರಿಗಣಿಸಲು ಸಂಕ್ಷಿಪ್ತ ಅಧಿವಿಚಾರಣೆ ನಡೆಸಲು ಸಾಧ್ಯವಿಲ್ಲ. ವಾಸ್ತವವಾಗಿ, ನಿರ್ಣಯಗಳ ಸರಣಿಯಲ್ಲಿ ಈ ನ್ಯಾಯಾಲಯ ಮತ್ತು ಅಪೆಕ್ಸ್ ನ್ಯಾಯಾಲಯ ಕಾಲಾವಕಾಶ ಹೊಂದಿದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಅಪರೂಪದಲ್ಲಿ ಅಪರೂಪದ

ಪ್ರಕರಣವೆನ್ನಬಹುದೆಂದು ಮತ್ತೊಮ್ಮೆ ಅಭಿಪ್ರಾಯಪಟ್ಟಿದೆ. ಈ ನ್ಯಾಯಾಲಯವು, ಪ್ರಕರಣದ ವಾಸ್ತವ ಸಂಗತಿಗಳು ಮತ್ತು ಸಂದರ್ಭಗಳು ಈ ಹಂತದಲ್ಲಿ ಈ ವ್ಯವಹರಣೆಗಳನ್ನು ರದ್ದುಪಡಿಸಲು ಈ ನ್ಯಾಯಾಲಯದ ನಿಹಿತ ಅಧಿಕಾರವನ್ನು ಚಲಾಯಿಸಲು ಕೋರುವುದಿಲ್ಲವೆಂದು ಅಭಿಪ್ರಾಯಪಡುತ್ತದೆ. ಆ ದೃಷ್ಟಿಯಿಂದ ವಿಷಯ ಪರಿಶೀಲನೆ ಮಾಡಿದಾಗ, ಈ ನ್ಯಾಯಾಲಯವು, ಆಪಾದಿತ ಸಂಖ್ಯೆ 2ರಿಂದ 5ರವರೆಗಿನ ಆಪಾದಿತರು ಸಲ್ಲಿಸಿದ ಅರ್ಜಿಗಳು ಅವಧಿಪೂರ್ವ ಸ್ವರೂಪದ್ದಾಗಿವೆಯೆಂದು ಮತ್ತು ಅವುಗಳನ್ನು ವಜಾಗೊಳಿಸಬೇಕೆಂದು ಅಭಿಪ್ರಾಯಪಡುತ್ತದೆ. ತದನುಸಾರವಾಗಿ ಕ್ರಿಮಿನಲ್ ಅರ್ಜಿ ಸಂ. 234/2011, 4090/2011 ಮತ್ತು 957/2011ನ್ನು ವಜಾಗೊಳಿಸಲಾಗಿದೆ. ಹಾಗೆ ಮಾಡುವಾಗ, ಅರ್ಜಿದಾರರ ವಿರುದ್ಧ ಆಪಾದಿಸಿರುವ ಅಪರಾಧಗಳಿಗೆ ಸಂಬಂಧಪಟ್ಟಂತೆ ಪ್ರಾಸಿಕ್ಯೂಷನ್‌ಗೆ ಕರೆದಿರುವ ಅವರಲ್ಲಿ ಪ್ರತಿಯೊಬ್ಬರೂ ಭಾಗಿಯಾಗಿರುವುದನ್ನು ತೋರಿಸುವ ಯಾವುವೇ ಸಾಕ್ಷ್ಯಗಳಿಲ್ಲವೆಂದು ದೃಢಪಡಿಸಲು ಸಾಕಷ್ಟು ಸಾಕ್ಷ್ಯಗಳನ್ನು ಅವರು ಹೊಂದಿದ್ದಾರೆಂಬುದನ್ನು ಹೊರತುಪಡಿಸಿ, ಅವರನ್ನು ಆರೋಪಮುಕ್ತಗೊಳಿಸಲು ಕೋರಿರುವ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರರಿಗೆ ಮುಕ್ತ ಅವಕಾಶ ನೀಡಲಾಗಿದೆ.

5. ಕ್ರಿಮಿನಲ್ ಅರ್ಜಿ ಸಂಖ್ಯೆ 4582/2012ರಲ್ಲಿ ಮೊದಲ ಆಪಾದಿತನ ವಿರುದ್ಧ ಆಪಾದಿಸಲಾದ ಅಪರಾಧವು ಇತರ ಅಪರಾಧಗಳ ಪೈಕಿ ಭಾರತ ದಂಡ ಸಂಹಿತೆಯ 376ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವಾಗಿದೆ. ಆರೋಪಪಟ್ಟಿ ಸಲ್ಲಿಸುವ ಮುಂಚೆಯೇ ಮೊದಲನೇ ಆಪಾದಿತ ಮತ್ತು ಇತರರು ದೂರಿನಲ್ಲಿ ಮಾಡಲಾದ ವಿವಿಧ ಆಪಾದನೆಗಳಿಗೆ ಮಾಧ್ಯಮದಲ್ಲಿ ಪ್ರತಿಕ್ರಿಯಿಸಿದ್ದಾರೆಂದು ಹೇಳಿರುವುದು ಕಂಡುಬಂದಿದ್ದು, ಅದನ್ನು ಕಾಂಪ್ಯಾಕ್ಟ್ ಡಿಸ್ಕ್‌ನಲ್ಲಿ ರೆಕಾರ್ಡ್ ಮಾಡಿದ್ದಾರೆಂದು ಹೇಳಲಾಗಿದೆ ಮತ್ತು ಸದರಿ ದಾಖಲೆಗಳನ್ನು ತನಿಖೆಯ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳಲಾಗಿದೆ. ಆಪಾದಿತ ಸಂಖ್ಯೆ–1 ಇವರ ಧ್ವನಿಮಾದರಿಯು, ವಶಪಡಿಸಿಕೊಳ್ಳಲಾದ ಕಾಂಪ್ಯಾಕ್ಟ್ ಡಿಸ್ಕ್‌ಗಳಲ್ಲಿ ರೆಕಾರ್ಡ್ ಆಗಿರುವ ಧ್ವನಿಯೊಂದಿಗೆ ಹೋಲಿಸಿ ನೋಡಲು ಅಗತ್ಯವಾಗಿದೆಯೆಂದು ಹೇಳಲಾಗಿದೆ. ಆಪಾದಿಸಲಾದ ಅಪರಾಧ ನಡೆದ ಸಮಯದಲ್ಲಿ ಅವರಿಗೆ 30 ವರ್ಷಗಳಿಗಿಂತ ಸ್ವಲ್ಪಹೆಚ್ಚಿನ

ವಯಸ್ಸಾಗಿದ್ದರೂ, ಅವನ ಲೈಂಗಿಕ ಸಾಮರ್ಥ್ಯವು ಅವರ ವಯಸ್ಸಿನೊಂದಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಅವರು ಅಂಥ ಕೃತ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲವೆಂದು ತೋರಿಸುತ್ತಿತ್ತು ಎನ್ನುವಷ್ಟರ ಮಟ್ಟಿಗೆ ಆಪಾದಿತ ಸಂಖ್ಯೆ–1ರ ಮತ್ತು ಅವರ ಪರವಾಗಿ ನೀಡಲಾದ ಹೇಳಿಕೆಗಳಿವೆಯೆಂದು ಸಹ ಹೇಳಲಾಗಿದೆ. ಭಾರತ ದಂಡ ಸಂಹಿತೆಯ 376ನೇ ಪ್ರಕರಣವನ್ನು ಅವಲೋಕಿಸಿದಾಗ, ಅಂಥ ಅಪರಾಧವನ್ನು ಮಾಡಲು ಅವನು ಸಮರ್ಥನಾಗಿದ್ದಾನೆಂದು ರುಜುವಾತುಪಡಿಸಲು ಸಾಕಷ್ಟು ಸಾಕ್ಷ್ಯವನ್ನು ಒಟ್ಟುಗೂಡಿಸಲು ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅಗತ್ಯವಿದೆ. ಆ ಸಂಬಂಧ, ತನಿಖೆಯ ಮೊದಲನೇ ಆಪಾದಿತನನ್ನು ಧ್ವನಿಪರೀಕ್ಷೆ, ರಕ್ತಪರೀಕ್ಷೆ ಮತ್ತು ಪುರುಷತ್ವ ಪರೀಕ್ಷೆಗೆ ಒಳಪಡಬೇಕೆಂದು ಅಗತ್ಯಪಡಿಸಿದಲ್ಲಿ, ಅದಕ್ಕೆ ಸಂಬಂಧಿಸಿದ ಕೋರಿಕೆಯು, ಕೆಳಗಿನ ನ್ಯಾಯಾಲಯವು ಸರಿಯಾಗಿ ಪರಿಶೀಲಿಸಿರುವಂತೆ, ನ್ಯಾಯಯುತವಾಗಿ ಮತ್ತು ಸೂಕ್ತವಾಗಿ ಇರುವುದೆಂದು ಕಂಡುಬರುತ್ತದೆ.

6. ವಾಸ್ತವವಾಗಿ ದಂಡಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದೊಂದಿಗೆ ಓದಲಾದ 53–ಎ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿ ಕುರಿತಂತೆ, ಹೊರಡಿಸಲಾದ ದಿನಾಂಕ 18.6.2012ರ ಆದೇಶವು ಈ ಅರ್ಜಿಯಲ್ಲಿ ಪ್ರಶ್ನಿತವಾಗಿದ್ದು, ಪಕ್ಷಕಾರರು ಅವಲಂಬಿಸಿದ ನಿರ್ಣಯಗಳ ಆಧಾರದ ಮೇಲೆ ಸದರಿ ಅರ್ಜಿಯಲ್ಲಿ ಪಕ್ಷಕಾರರಿಂದ ಎತ್ತಲಾದ ಪರಸ್ಪರ ವಿರುದ್ಧದ ವಾದಗಳಿಗೆ ಮಾನ್ಯ ಮ್ಯಾಜಿಸ್ಟ್ರೇಟರು ಎಚ್ಚರಿಕೆಯಿಂದ ಅಭಿಪ್ರಾಯ ನೀಡಿದ್ದಾರೆಂಬ ಕಾರಣಕ್ಕಾಗಿ ಅದು ನ್ಯಾಯಯುತವಾಗಿ ಹಾಗೂ ಸೂಕ್ತವಾಗಿರುವುದಾಗಿ ಕಂಡುಬರುತ್ತದೆ ಮತ್ತು ಆ ನಂತರ, ವಾಸ್ತವ ಸನ್ನಿವೇಶದಲ್ಲಿ ಅರ್ಜಿದಾರ ಅಂದರೆ, ಆಪಾದಿತ ಸಂಖ್ಯೆ–1ರ ಆಪಾದಿತನನ್ನು ಸಿ.ಸಿ.ಸಂಖ್ಯೆ 204/2010ರಲ್ಲಿ ಧ್ವನಿಪರೀಕ್ಷೆ, ರಕ್ತಪರೀಕ್ಷೆ ಮತ್ತು ಪುರುಷತ್ವ ಪರೀಕ್ಷೆಗೆ ಒಳಪಡಿಸುವುದು ಅತ್ಯವಶ್ಯವೆಂದು ಸರಿಯಾದ ತೀರ್ಮಾನಕ್ಕೆ ಬರಲಾಗಿದೆ. ಮಾನ್ಯ ಮ್ಯಾಜಿಸ್ಟ್ರೇಟರು ಹೊರಡಿಸಿದ ಆದೇಶವು ಪರಿಗಣಿತವಾದ ಆದೇಶವಾಗಿರುವುದರಿಂದ ಮತ್ತು ಅದು ಯಾವುದೇ ಕಾನೂನುಬಾಹಿರತೆ ಅಥವಾ ಅಕ್ರಮದಿಂದ

ಕೂಡಿಲ್ಲದಿರುವುದರಿಂದ, ಈ ಸಂದರ್ಭದಲ್ಲಿ ಅದನ್ನು ರದ್ದುಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಮತ್ತು ಅದರ ಸರಿತನವನ್ನು ನಿರ್ಧರಿಸಲು ಅತ್ಯಗತ್ಯವಾದ ಮುಂದಿನ ತನಿಖೆಯನ್ನು ಬೇಕೆಂದೇ ಕಾಲವಿಳಂಬ ಮಾಡಿದಂತಾಗುತ್ತದೆ ಅಥವಾ ಅರ್ಜಿದಾರ/ಆಪಾದಿತ ಸಂಖ್ಯೆ–1ರ ವಿರುದ್ಧ ಮಾಡಲಾದ ಆರೋಪಗಳಿಗೆ ವಿರುದ್ಧವಾಗುತ್ತದೆ. ತದನುಸಾರವಾಗಿ, ಕ್ರಿಮಿನಲ್ ಅರ್ಜಿ ಸಂಖ್ಯೆ 4852/2012ನ್ನು ವಜಾ ಮಾಡಲಾಗಿದೆ.

7. ಕ್ರಿಮಿನಲ್ ಅರ್ಜಿ ಸಂಖ್ಯೆ 4582/2012 ವಜಾ ಆಗಿರುವ ದೃಷ್ಟಿಯಿಂದ ಸಿ.ಸಿ.ಸಂಖ್ಯೆ 204/2010ರಲ್ಲಿನ ಅರ್ಜಿದಾರ/ಆಪಾದಿತ ಸಂಖ್ಯೆ 1ರ ಆಪಾದಿತನಿಗೆ, ಅರ್ಹ ವೈದ್ಯರಿಂದ ತನ್ನ ರಕ್ತದ ಮಾದರಿಗಳನ್ನು ಹೊರತೆಗೆಯಲು ಮತ್ತು ತನಿಖೆಯ ಉದ್ದೇಶಕ್ಕಾಗಿ ಅವರ ಧ್ವನಿಯ ಮಾದರಿಗಳನ್ನು ತೆಗೆದುಕೊಳ್ಳಲು ಸಹ ತನಿಖಾಧಿಕಾರಿಗೆ ಸಹಕರಿಸಲು ನಿರ್ದೇಶಿಸಲಾಗಿದೆ. ಸಿ.ಸಿ.ಸಂಖ್ಯೆ 204/2010ರಲ್ಲಿ ಹೊರಡಿಸಲಾದ ದಿನಾಂಕ 18.6.2012ರ ಆದೇಶದ ಅನುಸಾರ, ವೈದ್ಯರು ಯೋಗ್ಯವೆಂದು ಭಾವಿಸುವಂತೆ, ಅವರ ಮೇಲೆ ಅಂಥ ಪರೀಕ್ಷೆ ನಡೆಸಲು ಸದರಿ ಅರ್ಹವೈದ್ಯರು ನಿಗದಿಪಡಿಸಿದ ದಿನ ಮತ್ತು ದಿನಾಂಕದಂದು ವೈದ್ಯಕೀಯ ಪರೀಕ್ಷೆಗೆ ತಾನು ಸ್ವಇಚ್ಛೆಯಿಂದ ಹಾಜರಾಗತಕ್ಕದ್ದು. ಅರ್ಜಿದಾರನು ತನಿಖಾಧಿಕಾರಿಗೆ ಸಹಕರಿಸುವಲ್ಲಿ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲು ವಿಫಲನಾದ ಸಂದರ್ಭದಲ್ಲಿ, ಅವರ ಪರವಾಗಿ ನೀಡಲಾದ ಜಾಮೀನನ್ನು ಅವನು ಈಗಾಗಲೇ ಅನುಭವಿಸಿರುವ ಕಾರಣದಿಂದ ತನಿಖಾಧಿಕಾರಿಯು ಅವನ ರಕ್ತದ ಮಾದರಿಗಳು, ಧ್ವನಿಪರೀಕ್ಷೆ ಮತ್ತು ಅವನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವ ಸೀಮಿತ ಉದ್ದೇಶಕ್ಕಾಗಿ ಅರ್ಜಿದಾರನನ್ನು ವಶಕ್ಕೆ ತೆಗೆದುಕೊಳ್ಳುವ ಅವಕಾಶವಿದೆ ಮತ್ತು ಆ ಪ್ರಕ್ರಿಯೆ ಮುಕ್ತಾಯವಾದ ಮೇಲೆ ಅವನನ್ನು ಬಿಡುಗಡೆ ಮಾಡತಕ್ಕದ್ದು. ಈ ಹಿಂದೆ ಹೇಳಿದ ಪರೀಕ್ಷೆಗಳಿಗೆ ಅರ್ಜಿದಾರನು ಸ್ವಇಚ್ಛೆಯಿಂದ ಒಳಪಟ್ಟ ಸಂದರ್ಭದಲ್ಲಿ ಅವನನ್ನು ವಶಕ್ಕೆ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ತದನುಸಾರವಾಗಿ ಎಲ್ಲಾ ನಾಲ್ಕೂ ಅರ್ಜಿಗಳನ್ನು ವಜಾ ಮಾಡಲಾಗಿದೆ.

8. ಎಲ್ಲಾ ಅರ್ಜಿಗಳನ್ನು ವಜಾ ಮಾಡುವಾಗ, ಈ ನ್ಯಾಯಾಲಯವು ಆಪಾದಿತ ಸಂಖ್ಯೆ 1ಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಆಪಾದಿತ ಸಂಖ್ಯೆ 2ರಿಂದ 5ರವರೆಗಿನ ಆಪಾದಿತರ ವಿರುದ್ಧದ ವ್ಯವಹರಣೆಗಳನ್ನು ರದ್ದುಪಡಿಸುವುದನ್ನು ಮತ್ತು ಮುಂದಿನ ತನಿಖೆಗಾಗಿ ಹೊರಡಿಸಿದ ಆದೇಶವನ್ನು ರದ್ದುಪಡಿಸುವುದನ್ನು ಪರಿಗಣಿಸಲು ಈ ವ್ಯವಹರಣೆಗಳನ್ನು ದಾಖಲು ಮಾಡಲಾಗಿದೆಯೆಂಬ ಕಾರಣಕ್ಕಾಗಿ, ಈ ವ್ಯವಹರಣೆಗಳಲ್ಲಿ ಪರಿಗಣನೆಯನ್ನು ನಾಲ್ಕು ಕ್ರಿಮಿನಲ್ ಅರ್ಜಿಗಳಲ್ಲೂ ಸಹ ಶ್ರೀಮತಿ ಆರತಿ ರಾವ್ ಎಂಬುವವರು ದಾವೆ ಹೂಡುವುದಕ್ಕೆ ಸಲ್ಲಿಸಿದ ಅರ್ಜಿಯು ಪರಿಗಣನೆಗೆ ಅರ್ಹವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ದಾವೆ ಹೂಡಿರುವ ಅರ್ಜಿದಾರ ಈ ಹಂತದಲ್ಲಿ ಹಾಜರಾಗುವ ಅಗತ್ಯವಿಲ್ಲ. ಅರ್ಜಿದಾರರು ಹಾಗೆ ಇಚ್ಛಿಸಿದಲ್ಲಿ ಸಿ.ಸಿ. ಸಂಖ್ಯೆ 204/2010ರಲ್ಲಿನ ವ್ಯವಹರಣೆಗೆ ಆಕೆ ಹೇಗೆ ಅಗತ್ಯ ಪಕ್ಷಕಾರಳಾಗುತ್ತಾಳೆಂಬುದನ್ನು ತೋರಿಸಲು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಮಂಡಿಸುವ ಮೂಲಕ ಸಿ.ಸಿ.ಸಂಖ್ಯೆ 204/2010ರಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅಂಥ ಸಂದರ್ಭದಲ್ಲಿ, ಆಕೆ ಹಾಜರುಪಡಿಸುವ ಸಾಕ್ಷ್ಯದ ಆಧಾರದ ಮೇಲೆ ಮಾನ್ಯ ಮ್ಯಾಜಿಸ್ಟ್ರೇಟರು ಸದರಿ ವ್ಯವಹರಣೆಯಲ್ಲಿ ಆಕೆಯನ್ನು ಪಕ್ಷಕಾರಳನ್ನಾಗಿ ಮಾಡುವ ಅಗತ್ಯವಿದೆಯೇ? ಎಂಬುದರ ಸ್ವತಂತ್ರ ನಿರ್ಣಯ ಕೈಗೊಳ್ಳಬಹುದು. ಆಕೆಗೆ ಅಂಥ ಸ್ವಾತಂತ್ರ್ಯವನ್ನು ಮೀಸಲಿರಿಸಿ, ಕ್ರಿಮಿನಲ್ ಅರ್ಜಿ ಸಂಖ್ಯೆ 4090/2011 ಮತ್ತು 957/2011ರಲ್ಲಿ ಐ.ಎ.1/2014 ಮತ್ತು ಕ್ರಿಮಿನಲ್ ಅರ್ಜಿ ಸಂ. 234/2011 ಮತ್ತು 4582/ 2011ರಲ್ಲಿ ಐ.ಎ. 2/2014ರಲ್ಲಿ ಆಕೆಯು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಗಿದೆ.

9. ಹಿಂದೆ ಹೇಳಿದ ಕ್ರಿಮಿನಲ್ ಅರ್ಜಿಗಳನ್ನು ಮತ್ತು ಕಾನೂನು ಪ್ರಕಾರ ಹಾಜರಾಗಲು ಅನುಮತಿ ಕೋರಿ ಆಪಾದಿತ ದೂರುದಾರರು ಸಲ್ಲಿಸಿದ, ಪಕ್ಷಕಾರರನ್ನಾಗಿ ಮಾಡುವ ಅರ್ಜಿಯನ್ನು ವಜಾ ಮಾಡುವಾಗ, ಈ ನ್ಯಾಯಾಲಯವು ಸಿ.ಸಿ.ಸಂಖ್ಯೆ 204/2010ರಲ್ಲಿನ ವ್ಯವಹರಣೆಯು ಸಾಕಷ್ಟು ಹಳೆಯದೆಂಬುದನ್ನು ಗಮನಿಸಿದೆ. ದೋಷಾರೋಪ ಪಟ್ಟಿಯನ್ನು 2010ರ ವರ್ಷದಲ್ಲಿ ಸಲ್ಲಿಸಿದ್ದರೂ, ನಾಲ್ಕೂ ವರ್ಷಗಳ ನಂತರ ಸಹ ಅದರಲ್ಲಿ ಯಾವುದೇ ಪ್ರಗತಿಯಾಗಿಲ್ಲ ಮತ್ತು ಅದು ಈ ವಿಷಯದ

ಬಗ್ಗೆ ಮುಂದಿನ ತನಿಖೆಯನ್ನು ಕೋರುತ್ತಾ, ಇನ್ನೂ ಪ್ರಾಸಿಕ್ಯೂಷನ್ ಹಂತದಲ್ಲೇ ಇದೆ. ಹಾಗಾಗಿ, ಈ ನ್ಯಾಯಾಲಯವು ರಾಮನಗರದ ಸಿ.ಜೆ.ಎಂ ನ್ಯಾಯಾಲಯಕ್ಕೆ ಇನ್ನಷ್ಟು ವಿಳಂಬ ಮಾಡದೆ ವಿಷಯದೊಂದಿಗೆ ಮುಂದುವರೆಯಲು ನಿರ್ದೇಶಿಸಿದೆ. ಈ ನ್ಯಾಯಾಲಯವು ಅದರಲ್ಲಿನ 1ರಿಂದ 5ರವರೆಗಿನ ಆಪಾದಿತರ ಪರವಾಗಿ ಹಾಜರಾಗುವ ವಕೀಲರ ಉಪಸ್ಥಿತಿಯಲ್ಲಿ ಸಿ.ಸಿ.ಸಂಖ್ಯೆ 204/2010ರಲ್ಲಿನ ಸುನಾವಣೆಯ ಮುಂದಿನ ದಿನಾಂಕವನ್ನು ನಿಗದಿಪಡಿಸುತ್ತದೆ. ರಿಜಿಸ್ಟ್ರಾರ್ ಕಚೇರಿಯು, ದಿನಾಂಕ 28.7.2014ರಂದು ಸಿ.ಸಿ.ಸಂಖ್ಯೆ 204/2010ರ ಸುನಾವಣೆಗಾಗಿ ಈ ಆದೇಶದ ಒಂದು ಪ್ರತಿಯನ್ನು ಮಾನ್ಯ ಸಿ.ಜೆ.ಎಂ., ರಾಮನಗರ ಇಲ್ಲಿಗೆ ಕಳುಹಿಸತಕ್ಕದ್ದು.